ಅನುಭವ ಕಥನ

# ಹೀಗೊಬ್ಬ ಶಿವಾಜಿರಾವ್



**ಮಾನಸಿಕ ಸ್ವಾಸ್ಥ್ಯ ಕಳೆದುಕೊಂಡ ಅನೇಕ ಶಿವಾಜಿರಾವ್ ಸಾವಂತ್‌ರನ್ನು ನಮ್ಮ ನಡುವೆಯೇ ನಾವು ಕಾಣುತ್ತಿರುತ್ತೇವೆ. ಬದುಕಿನ ದಿಕ್ಕು ತಪ್ಪಿ ಬೀದಿಬೀದಿ ಅಲೆಯುವ ಇಂಥ ನೂರಾರು ವ್ಯಕ್ತಿಗಳು ನಮ್ಮಗಳ ಮಧ್ಯೆಯೇ ಇದ್ದಾರೆ.**

**■ ಶುಭಾ ಖಟಾವಕರ ಮೈತ್ರಸ್**

ನಾನು ಮತ್ತು ನಮ್ಮ ಮನೆಗೆ ಬೇಸಿಗೆ ರಜೆಗೆ ಬಂದ ನಮ್ಮ ಮಾವಶಿಯ ಮಗಳು ಸುನಂದಾ ಬೆಳಗಿನ ಸಕ್ಕರೆ ನಿದ್ದೆಯಲ್ಲಿದ್ದೆವು. ನನ್ನ ಅಣ್ಣ ಇಬ್ಬರನ್ನೂ ಜಾಗಿಂಗ್ ಮಾಡಲು ಎಬ್ಬಿಸಿದ. ಇಬ್ಬರೂ ಏಳಲಾರದೆ ಎದ್ದು ಓಡಲು ಹೋದೆವು. ಜೋರುಜೋರಾಗಿ ನಗುತ್ತ, ಒಂದು ಮಾವಿನ ಮರದ ಸುತ್ತ ಓಡುತ್ತ ಪ್ರದಕ್ಷಿಣೆ ಹಾಕಲಾರಂಭಿಸಿದೆವು.

ಅಷ್ಟರಲ್ಲಿ 'ಬಕ್ ಅಪ್! ಬಕ್ ಅಪ್! ಫಾಸ್ಟರ್, ಫಾಸ್ಟರ್!' ಎಂದು ಯಾರೋ ಕೂಗಲಾರಂಭಿಸಿದರು. ಇಬ್ಬರೂ ಧ್ವನಿ ಬಂದತ್ತ ತಿರುಗಿ ನೋಡಿದೆವು. ಕಟ್ಟಡವೊಂದರ ಕಟ್ಟೆಯ ಮೇಲೆ ಮಧ್ಯಮ ಎತ್ತರದ ಆಕೃತಿಯು ಎದ್ದು ನಿಂತಿತ್ತು. ಆತ ಧರಿಸಿದ ಬಟ್ಟೆಗಳು ಅಸ್ತವ್ಯಸ್ತವಾಗಿದ್ದು, ಕೊಳಕಾಗಿದ್ದವು. ನೆಲದ ಮೇಲೆ ಕೆಲವು ಚಿಂದಿ ಬಟ್ಟೆಗಳು ಹರಡಿದ್ದವು.

ನೆತ್ತಿ ಮೇಲೆ ಜುಟ್ಟು ಕಟ್ಟಿಕೊಂಡ ಆ ವ್ಯಕ್ತಿಯ ಕಣ್ಣುಗುಡ್ಡೆಗಳು ಸತತವಾಗಿ ಚಲಿಸುತ್ತಿದ್ದವು. ಮುಖದ ಮೇಲೆ ವಿಲಕ್ಷಣ ನಗುವಿತ್ತು. ನಮ್ಮಿಬ್ಬರನ್ನು ಆತ ಓಡಲು ಹುರಿದುಂಬಿಸುತ್ತಿದ್ದ. ನಾನು ಹಾಗೂ ಸುನಂದಾ ಸ್ತಂಭೀಭೂತರಾಗಿ, ಬಾಯಿ ಬಿಟ್ಟುಕೊಂಡು ಆತನನ್ನು ನೋಡುತ್ತ ನಿಂತಿದ್ದೆವು. ಆತನ ಮುಖಚರ್ಯೆಯೋ, ಅವತಾರವೋ ಅಥವಾ ಅವೆಲ್ಲವುಗಳ ಮಧ್ಯೆ ಆತನ ಇಂಗ್ಲಿಷ್ ಮಾತನಾಡುವ ಪರಿಯೋ... ಆತ ಮತ್ತೆ 'ರನ್ ರನ್' ಎಂದಾಗ, ನಾನು ಮತ್ತು ಸುನಂದಾ ಮನೆಯತ್ತ ಓಟಕಿತ್ತೆವು.

ಉಪಾಹಾರದ ಸಮಯದಲ್ಲಿ ನಾನು ಆ ವ್ಯಕ್ತಿಯ ಬಗ್ಗೆ ವಿಷಯ ಆರಂಭಿಸಿದೆ. ನಮ್ಮ ತಂದೆ ಪಶು ವೈದ್ಯಕೀಯ ವಿಭಾಗದ ಉನ್ನತ ಅಧಿಕಾರಿಯಾಗಿದ್ದರು. ಬೆಳಗಾವಿಯ ಪಶುವೈದ್ಯಕೀಯ ಆಸ್ಪತ್ರೆಯ ಆವರಣದಲ್ಲಿ ನಮಗೆ ವಸತಿ ಕಲ್ಪಿಸಿಕೊಡಲಾಗಿತ್ತು. ಸ್ವಲ್ಪ ಹೊತ್ತು ನನ್ನ ಪುರಾಣ ಕೇಳಿದ ಅಣ್ಣ (ನನ್ನ ತಂದೆ), ನನ್ನ ಮಾತಿನತ್ತ ಗಮನ ಕೊಟ್ಟಂತೆ ಕಾಣಲಿಲ್ಲ.

ಮಧ್ಯಾಹ್ನದ ಊಟದ ಸಮಯಕ್ಕೆ ಬಾಗಿಲಲ್ಲಿ 'ಆತ' ನಿಂತಿದ್ದ. ಭಯಪಡುತ್ತ ಏನು ಬೇಕು ಎಂದು ಕೇಳಿದೆ. 'ಹಾಯ್! ನನ್ನ ಹೆಸರು ಶಿವಾಜಿರಾವ್ ಸಾವಂತ್. ಪ್ಲೀಸ್ ಕಾಲ್ ಯುವರ್ ಮದರ್' ಎಂದ. ನನಗೆ ತಿಳಿದಷ್ಟು ಇಂಗ್ಲಿಷ್‌ನಲ್ಲಿ, ಆತ ನಮ್ಮ ತಾಯಿಯನ್ನು ಕರೆಯಲು ಹೇಳುತ್ತಿದ್ದಾನೆಂದು ಅರ್ಥವಾಯಿತು. ನಾನು ಸಂಭ್ರಮಾಶ್ಚರ್ಯದಿಂದ ಒಳಗೆ ಓಡಿದೆ. ನನ್ನ ಜೀವಮಾನದಲ್ಲೇ ಇಂಗ್ಲಿಷ್ ಮಾತನಾಡುವ ಮೊದಲ ಭಿಕ್ಷುಕನನ್ನು ನೋಡಿದ್ದೆ.

ನಮ್ಮ ತಾಯಿಗೆ ಆತ, 'ಒಂದು ರೊಟ್ಟಿ ಕೊಡಿ ಪ್ಲೀಸ್' ಎಂದ. ನಮ್ಮ ತಾಯಿ ಆತನಿಗೆ ತಿನ್ನಲು ಕೊಟ್ಟು, ಅಲ್ಲಿಯೇ ಸುಳಿದಾಡುತ್ತಿದ್ದ ನನ್ನನ್ನು ಗದರಿಸಿ ಓಡಿಸಿದರು.

ಆಸ್ಪತ್ರೆಯ ಆವರಣದಲ್ಲಿ ಇತರ ಸಿಬ್ಬಂದಿ ವರ್ಗದವರ ಮಕ್ಕಳ ಜೊತೆ ನಾನು ಆಟವಾಡುತ್ತಿದ್ದೆ. ಶಿವಾಜಿರಾವ್ ಆಸ್ಪತ್ರೆಯ ಪ್ರಯೋಗಾಲಯದ ಕಟ್ಟೆಯ ಮೇಲೆ ಠಿಕಾಣಿ ಹೂಡಿದ್ದ. ಆತ ಯಾರು ಎಂಬುದರ ಬಗ್ಗೆ ಎಲ್ಲರಿಗೂ ಜಿಜ್ಞಾಸೆ ಮೂಡಿತ್ತು. ಕೆಲವರು ಆತ ಒಬ್ಬ ಹೆಸರಾಂತ ವಕೀಲನೆಂದರೆ, ಇನ್ನೂ ಕೆಲವರು ಆತ ವೇಷ ಮರೆಸಿಕೊಂಡ ಸಿಐಡಿ ಅಧಿಕಾರಿಯೆಂದೂ ಹೇಳುತ್ತಿದ್ದರು. ಆತನೊಬ್ಬ ವಿಜ್ಞಾನಿಯಿರಬಹುದೆಂದೂ ಮಾತನಾಡಿಕೊಳ್ಳುತ್ತಿದ್ದರು.

ಒಮ್ಮೆ ಆತ ವಾಹನಗಳ ಹಿಂದೆ ನಿಂತು ಅವುಗಳ ನೋಂದಣಿ ಸಂಖ್ಯೆಗಳನ್ನು ಬರೆದುಕೊಳ್ಳುತ್ತಿರುವಾಗ ನಾನು ಅದರ ಬಗ್ಗೆ ಪ್ರಶ್ನಿಸಿದೆ. ಅವೆಲ್ಲವೂ ಕಾಳಸಂತೆಕೋರರ ವಾಹನಗಳೆಂದೂ, ಪೊಲೀಸ್ ಅಧಿಕಾರಿಗಳಿಗೆ ಶೀಘ್ರದಲ್ಲೇ ಅದರ ಬಗ್ಗೆ ದೂರು ಸಲ್ಲಿಸಲಿರುವನೆಂದೂ ಹೇಳಿದ. ಆತನ ಬಗ್ಗೆ ನನಗೆ ಭಯವಷ್ಟೇ ಅಲ್ಲದೆ ಗೌರವಾದರಗಳೂ ಮೂಡಿದ್ದವು.